
ರಚನೆ, ಡಿಜಿಟಲ್ ಪೇಂಟಿಂಗ್ ರೂಪ ತಾಳಿತು. ಕೆಲವು ವೇಳೆ ಪೋಸ್ಟ್ ಕಾರ್ಡ್ ಮೇಲೆ ಚಿತ್ರ ರಚಿಸಿ, ಬಣ್ಣತುಂಬಿ ಆ ಕಾರ್ಡುಗಳನ್ನು ನಮಗೆ ಕಳಿಸುತ್ತಿದ್ದರು. ಮುಂದೆ ಕಂಪ್ಯೂಟರನ್ನು ಕರಗತ ಮಾಡಿಕೊಂಡಮೇಲೆ ತಾವು ತೆಗೆದ ಫೋಟೊಗಳನ್ನು ಕಂಪ್ಯೂಟರ್‌ಗೆ ಅಳವಡಿಸಿ, ಅವುಗಳನ್ನು ತಿದ್ದಿ, ಬಣ್ಣ ತುಂಬಿ ಹೊಸ ಚಿತ್ರವನ್ನಾಗಿಸುತ್ತಿದ್ದರು. ಇದು ಲೇಖಕನಾಗಿ ಹೊರಹೊಮ್ಮಿದ ಅವರ ಸೃಜನಶೀಲ ಪ್ರತಿಭೆಗೆ ಅಂಚು ಕಟ್ಟಿದ ಅಲಂಕಾರದಂತೆ.



ತೇಜಸ್ವಿ ರಚಿಸಿದ ಸಂತೆಯ ದೃಶ್ಯ.

ತೇಜಸ್ವಿಯವರು ಹಲವು ಕತೆ ಕಾದಂಬರಿಗಳನ್ನು ಬರೆದಿದ್ದರೂ, ಅವರು ಬರೆದ ನಾಟಕ ಮತ್ತು ಕವನ ಸಂಕಲನಗಳು ತಲಾ ಒಂದೊಂದೇ. ಅವರ ನಾಟಕ 'ಯಮಳ ಪ್ರಶ್ನೆ'ಯ ಹಿಂದೆ ಅಂದಿನ ಒಂದು ಸಾಂಸ್ಕೃತಿಕ ಕಥಾನಕವೇ ಇದೆ. ಈ ಸ್ನೇಹಿತರು ವಿದ್ಯಾರ್ಥಿಗಳಾಗಿರುವಾಗ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ 'ಫ್ಯಾಕಲ್ಟಿ ಕ್ಲಬ್' ಎಂಬ ಅಧ್ಯಾಪಕರ ಸಂಘ ಇತ್ತು. ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವದ ಸಮಯದಲ್ಲಿ ಈ ಅಧ್ಯಾಪಕರ ಸಂಘ ನೂತನ ಪದವೀಧರರಿಗೆ ಟೀಚರ್ಸ್ ಮತ್ತು ವಿದ್ಯಾರ್ಥಿಗಳ ಡಿಬೇಟ್, ಕಾಫಿ ತಿಂಡಿ, ನೋಡಲು ನಾಟಕದ ಕಾರ್ಯಕ್ರಮ ಏರ್ಪಡಿಸುತ್ತಿದ್ದರು. ಡಿ.ವಿ. ಅರಸರು ಈ ಕ್ಲಬ್‌ನ ಅಧ್ಯಕ್ಷರಾದಾಗ ಈ ಉತ್ಸವವನ್ನು ಮೂರು ದಿನಗಳ ಉತ್ಸವವಾಗಿ ಮಾರ್ಪಡಿಸಿದರು. ಮೂರು ದಿನ ನಾಟಕಗಳು ನಡೆಯುತ್ತಿದ್ದವು. ಒಮ್ಮೆ ಕೈಲಾಸಂರ 'ತಾಳಿ ಕಟ್ಟೋಕೆ ಕೂಲಿನೇ?' ಮತ್ತು 'ಗಂಡಸ್ಕತ್ರಿ' ನಾಟಕಗಳು ನಡೆದವು. ಅಂದಿನ ಪ್ರತಿಷ್ಠಿತ ಸಾಹಿತ್ಯ ಪ್ರೇಮಿಗಳಾದ ಸಿಂಧುವಳ್ಳಿ ಅನಂತಮೂರ್ತಿ, ಮಿರ್ಲೆ ವಿಶ್ವನಾಥ್, ದ್ವಾರಕಾನಾಥ್, ನ. ರತ್ನ, ಎಚ್.ಎಂ. ಚನ್ನಯ್ಯ, ಜಿ.ಎಚ್. ನಾಯಕ, ಸಂಪತ್, ಬಿ.ಎ. ಆಚಾರ್, ಬಾಲ ಗೋಪಾಲವರ್ಮ ಇವರೊಡನೆ ತೇಜಸ್ವಿ ಮತ್ತು ಶ್ರೀರಾಮ್ ನಾಟಕಗಳನ್ನು ನೋಡುತ್ತಿದ್ದರು. ಈ ಸಮಯದಲ್ಲಿ ತೇಜಸ್ವಿ ಪ್ರತಿದಿನ ಜಿ.ಎಚ್. ನಾಯಕ, ಚನ್ನಯ್ಯ, ದಾಮೋದರ ರಾವ್, ದ್ವಾರಕಿ ಇವರಿಗೆ ಒಂದೊಂದು ಕತೆ ಹೇಳಿ, ಇದನ್ನು ನೀವು ಯಾರಾದರೂ ನಾಟಕವನ್ನಾಗಿಸಿ ಎಂದು ಹೇಳುತ್ತಿದ್ದರು. ಆದರೆ, ಈ ಸ್ನೇಹಿತರು ನಮಗೆ ಸಾಧ್ಯವಿಲ್ಲ ನೀವೇ ಮಾಡಿ ಎಂದುಬಿಟ್ಟರು. ಆಗಿನ ದಿನಗಳು ಅಸಂಗತ ನಾಟಕಗಳ ಕಾಲವಾಗಿತ್ತು. ಆಗ ತೇಜಸ್ವಿಯವರೇ ಒಂದು ಅಸಂಗತ ನಾಟಕ ಬರೆದು ಅದಕ್ಕೆ 'ಕಿಕ್ ಸ್ಟಾರ್ಟರ್' ಅಥವಾ 'ಸತ್ತವರ ಕೋಣೆ' ಎಂದು ಹೆಸರಿಡೋಣ ಎಂದು ಶ್ರೀರಾಮ್‌ಗೆ ಹೇಳಿದಾಗ, ಅವರು ಈಗಾಗಲೇ 'ಸತ್ತವರ ಕೋಣೆ' ಹೆಸರಿನಲ್ಲಿ ಚದುರಂಗರ ರೇಡಿಯೊ